# ನಕ್ಕುಬಿಡಿ





## ಯಾಕೆ ಬಾರಿಸಿದ್ದು?

ಯಾಕೋ, ಅಳ್ತಾ ಬರ್ತಾ ಇದೀಯ, ಏನಾಯ್ತು?

ಟೀಚರ್ ಕ್ಲಾಸಿನಲ್ಲಿ ಕೇಳಿದ ಪ್ರಶ್ನೆಗೆ ನಾನೊಬ್ಬನೇ ಉತ್ತರ ಕೊಟ್ಟಿದ್ದು, ಆದ್ರೂ ಕಪಾಳಕ್ಕೆ ಬಾರಿಸಿದ್ರು........

ನಾನು ಬಂದು ದಬಾಯಿಸ್ತೀನಿ ಆ ಟೀಚರ್‌ಗೆ, ಅದಿರಲಿ ಏನು ಪ್ರಶ್ನೆ ಕೇಳಿದ್ದು ಅವರು?

ಅವರ ವ್ಯಾನಿಟಿ ಬ್ಯಾಗ್‌ನಲ್ಲಿ ಕಪ್ಪೆಮರಿ ಇಟ್ಟಿದ್ದು ಯಾರು ಅಂತ!

★★★

## ಶೀಘ್ರ ಕಲ್ಯಾಣ

ಜ್ಯೋತಿಷಿ: ನಿಮ್ಮ ವಿವಾಹ ಅತಿ ಶೀಘ್ರದಲ್ಲಿಯೇ ಭಾರೀ ಸುಂದರ ಶ್ರೀಮಂತ ಯುವಕನೊಂದಿಗೆ ಜರುಗಲಿದೆ ಚಿಂತಿಸಬೇಡಿ.

ಯುವತಿ: (ಆನಂದ ತುಂದಿಲಳಾಗಿ) ಹೌದೇ! ಹಾಗಾದರೆ ಈಗಲೇ ನನ್ನ ಗಂಡನಿಗೆ ಡೈವೋರ್ಸ್ ನೋಟಿಸ್ ಕಳಿಸಲೇ?

★★★

## ಯಾವ ರಾಗ?

ಗಾಯಕಿ: ನೀವು ಇಷ್ಟೊಂದು ಅಭಿಮಾನದಿಂದ ಒತ್ತಾಯ ಮಾಡುತ್ತಿರುವಾಗ ನಾನು ಹೇಗೆ ಹಾಡದಿರಲಿ? ಯಾವ ರಾಗ ಹಾಡಲಿ?

ಗುಂಡ: ಯಾವುದೋ ಒಂದು, ಒಟ್ಟಾರೆ ನಮ್ಮ ಪಕ್ಕದ ಮನೆಯವರಿಗೆ ತಲೆ ಕೆಟ್ಟು ಪರಪರ ಕೆರೆದುಕೊಂಡು ಮನೆ ಖಾಲಿ ಮಾಡಬೇಕು ಅಷ್ಟೇ?

★★★

## ಡಾಕ್ಟರ್ ಬೇಡ

ಹೆಂಡತಿ: ಅಲ್ರೀ, ಅಷ್ಟು ಹಲ್ಲು ನೋವಿನಿಂದ ಒದ್ದಾಡ್ತಾ ಇದೀರಾ, ಈ ಊರಿನಲ್ಲಿ ಇಬ್ಬರು ಡಾಕ್ಟರ್ ಇದ್ದರೂ ನೀವ್ಯಾಕೆ ಹೋಗ್ತಾ ಇಲ್ಲ?

ಗಂಡ (ಆದಾಯ ತೆರಿಗೆ ಅಧಿಕಾರಿ): ಹೋಗೋ ಹಾಗಿಲ್ಲ ಕಣೇ! ಆ ಇಬ್ಬರಿಗೂ ಕಳೆದ ವಾರ ಸುಳ್ಳು ಲೆಕ್ಕ ತೋರಿಸಿದ್ದಕ್ಕೆ ದಂಡ ಹಾಕಿದ್ದೇನೆ.

★★★

## ಪುಕ್ಕಟೆ ಚಿಕಿತ್ಸೆ

ನಿಮ್ಮ ಆಸ್ಪತ್ರೆ ಉದ್ಘಾಟನೆಗೆ ಖಂಡಿತಾ ಬರ್ತೀನಿ, ಆದರೆ ಒಂದು ಕಂಡೀಷನ್ ನನಗೆ ಯಾವಾಗ ಚಿಕಿತ್ಸೆ ನೀಡಿದರೂ ಹಣ ತಗೋಬಾರದು.

ಅದೇನೋ ಸರಿ, ಸಾರ್. ಆದರೆ ನಮ್ಮದು ಹೆರಿಗೆ ಆಸ್ಪತ್ರೆ.

★★★

## ಕಾಲು ಮುರಿಯಿತು

ಈ ತಾಟಕಿ, ನನ್ನ ಹೆಂಡತಿ ನನ್ನ ಕಾಲು ಮುರಿದಿದ್ದಾಳೆ, ನನ್ನ ಬೆಡ್‌ಶೀಟನ್ನು ಕಿಟಕಿಯಿಂದ ಹೊರಗೆಸೆದಿದ್ದಾಳೆ!

ಬೆಡ್‌ಶೀಟ್ ಎಸೆದರೆ ನಿಮ್ಮ ಕಾಲು ಹೇಗೆ ಮುರಿಯಿತು?

ಬೆಡ್‌ಶೀಟ್‌ನೊಳಗೆ ನಾನು ಮಲಗಿದ್ದೆನಲ್ಲ!

(ಸಂಗ್ರಹ) ಕೆ.ಶ್ರೀನಿವಾಸರಾವ್ ಹರಪನಹಳ್ಳಿ

WIZTOONZ
college of media & design

Kick start your CAREER - Become a most sought after

MULTIMEDIA PROFESSIONAL

100% JOB

Assistance Programs

Why we are so sure?

ಇದು ಕೇವಲ ಸರಿಯಾದ ಪ್ರಮಾಣದಲ್ಲಿರುವ 4 ಪ್ರಮುಖ ಅಂಶಗಳು ಅವು ಯಾವುದೇ ಕೌಶಲ್ಯ ಮಟ್ಟದ ಉದ್ಯೋಗದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಉತ್ತಮ ಗುಣಮಟ್ಟದ ತರಬೇತಿ – ತರಬೇತುದಾರರ ನಡತೆ – ಆಕರ್ಷಕವಾದ ಪೋರ್ಟ್‌ಫೋಲಿಯೋ – ಉದ್ಯಮದ ಬೇಡಿಕೆ

ನಮ್ಮ ಕಾರ್ಯಕ್ರಮಗಳು ಮೇಲೆ ತಿಳಿಸಿರುವ ಎಲ್ಲಾ ಅಂಶಗಳ ಸರಿಯಾದ ಮಿಶ್ರಣದಿಂದ ವಿಶೇಷವಾಗಿ ವಿನ್ಯಾಸಗೊಂಡಿವೆ ಮತ್ತು ಭಾರತ ದೇಶದಾದ್ಯಂತ 30 ಕಂಪನಿಗಳೊಂದಿಗೆ ಇರುವ ನಮ್ಮ ಸಂಬಂಧ ಪ್ರಬಲವಾದ ಕ್ಯಾಂಪಸ್ ಪ್ಲೇಸ್‌ಮೆಂಟ್ ರೆಕಾರ್ಡ್‌ನೊಂದಿಗೆ ಬೇಡಿಕೆ ಮತ್ತು ಪೂರೈಕೆ ಇವೆರಡರ ಮಧ್ಯೆ ಸೇತುವೆಯಂತೆ ಪಾತ್ರ ವಹಿಸುತ್ತವೆ.



Advanced Diploma in Visual Communication
Duration-18 Months
Eligibility: Degree/Engineer /Diploma (Pass/Fail)

Diploma in Animation & Visual Effects
Duration-24 Months
Eligibility: 17+ yrs

Diploma in Visual Effects (VFX)
Duration-12 Months
Eligibility: 17+ yrs

WIZTOONZ College of Media & Design
13th Cross, 3rd Phase, JP Nagar, Bangalore - 560 078
www.wiztoonz.com facebook.com/wiztoonz
For admission, call: +91 90198 84884